**ಸಾಕ್ಷಿಯನ್ನು ದಿನಾಂಕಃ 25.01.2025 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ** ಪ್ರತಿವಾದಿ ನಂ.1 ರಿಂದ 4 ರವರ ಪರ ಶ್ರೀ ಎಸ್.ಡಿ.ಎಂ. ವಕೀಲರಿಂದಃ

ಈಗ ಸದ್ಯ ನಾನು ಬೀಳಗಿ ತಾಲೂಕಿನ ಗುಳಬಾಳ ಗ್ರಾಮದಲ್ಲಿ ಇರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಗುಳಬಾಳ ಮತ್ತು ಬರಗಿ ಗ್ರಾಮಕ್ಕೆ ಹೋಗಿಬಂದು ಮಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ಸುಮಾರು 25 ವರ್ಷಗಳಿಂದ ನನ್ನ ಕುಟುಂಬದೊಂದಿಗೆ ಗುಳಬಾಳ ಗ್ರಾಮದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದೂವರೆದು ಈಗ ಸುಮಾರು 7-8 ವರ್ಷಗಳಿಂದ ನಾನು ನನ್ನ ಕುಟುಂಬದೊಂದಿಗೆ ಗುಳಬಾಳ ಗ್ರಾಮದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆಯ ತಂದೆಯ ಹೆಸರು ಹನಮಂತ ಇರುತ್ತದೆ. ನಮ್ಮ ಅಜ್ಜನಾದ ಹನಮಂತ ಇವನಿಗೆ 6 ಜನ ಮಕ್ಕಳು ಇದ್ದರು. ಅವರು ಹೆಸರುಗಳು ರಾಮಪ್ಪ, ಲಕ್ಷ್ಮಪ್ಪ, ಕುಷ್ಣಪ್ಪ, ಅಪ್ಪಾಸಿ, ಶಂಕ್ರೆಪ್ಪ ಮತ್ತು ತಮ್ಮಣ್ಣ ಇರುತ್ತದೆ. ಸದರಿ ಮಕ್ಕಳ ಪೈಕಿ ಅಪ್ಪಾಸಿ ಮತ್ತು ಲಕ್ಷ್ಮಪ್ಪ ಇವರು ಬರಗಿ ಗ್ರಾಮದಲ್ಲಿ ಇರುತ್ತಿದ್ದರು ಎಂದರೆ ಸರಿ. ಲಕ್ಷ್ಮಪ್ಪನ ಹೆಸರಿನಲ್ಲಿ ಬರಗಿ ಗ್ರಾಮದ ಮನೆ ನಂ.316/1 ಮತ್ತು 316/2 ಇದ್ದವು ಎಂದರೆ ಸರಿ. ಬರಗಿ ಗ್ರಾಮದ ಮನೆ ನಂ.5 ಇದು ಅಪ್ಪಾಸಿ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಅಪ್ಪಾಸಿ ನನ್ನ ತಂದೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನಂತರವೂ ಸಹ ಸದರಿ ಮನೆ ನಂ.5 ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ.

ಬರಗಿ ಗ್ರಾಮದ ಮನೆ ನಂ.495 ನೇದ್ದನ್ನು 2009 ರಲ್ಲಿ ನಾನು, ನನ್ನ ಸಹೋದರರು ಮತ್ತು ನನ್ನ ತಂದೆ ತಾಯಿ ಕೂಡಿಕೊಂಡು ಪ್ರತಿವಾದಿ ನಂ.5 ರವರ ಗಂಡನಾದ ಗೋವಿಂದಪ್ಪ ಇವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ನಾನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಬರಗಿ ಗ್ರಾಮದ ಮನೆ ನಂ.5 ನ್ನು ಬಿಟ್ಟು ಉಳಿದ ಮನೆಯ ಆಸ್ತಿಗಳಿಗಲ್ಲಿ ನನಗೆ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ಮನೆ ನಂ.316 ಮೊದಲು ಲಕ್ಷ್ಮಪ್ಪ ಹನಮಪ್ಪ ಪಂಚಗಾಂವಿ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಲಕ್ಷಪ್ಪ ಇವರು 2002 ನೇ ಸಾಲಿನಲ್ಲಿ ಮನೆ ನಂ.316 ಕ್ಕೆ ಸಂಬಂದಿಸಿದಂತೆ ಒಂದು ಮೃತ್ಯು ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಪ್ರತಿವಾದಿ ನಂ.2 ಇವನು ಮೃತ ಲಕ್ಷ್ಮಪ್ಪ ಇವರ ಜೋಪಾನ ಜತನ ಮಾಡಿದ್ದರಿಂದ ಸದರಿ ಲಕ್ಷ್ಮಪ್ಪ ಇವನು ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಮನೆ ಆಸ್ತಿ ನಂ. 316 ಕ್ಕೆ ಸಂಬಂದಿಸಿದಂತೆ ನೋಂದಾಯಿತ ಮೃತ್ಯು ಪತ್ರವನ್ನು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಲಕ್ಷ್ಮಪ್ಪ ಇವನು 2000 ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ. ಲಕ್ಷ್ಮಪ್ಪ ಇವನು 10-02-2004 ರಂದು ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರು ತೀರಿಕೊಂಡಿರುತ್ತಾರೆ ಆದರೆ ನನಗೆ ಇಸ್ವಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಮನೆ ನಂ.316 ಇದು ಲಕ್ಷ್ಮಪ್ಪ ಇವನ ಸ್ವಂತ ಆಸ್ತಿ ಆಗಿದ್ದರಿಂದ ಅದಕ್ಕೆ ಸಂಬಂದಿಸಿದಂತೆ ಅವನು ನೋಂದಾಯಿತ ಮೃತ್ಯು ಪತ್ರವನ್ನು ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಮಾಡಿರುತ್ತಾನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿ:**